## ಆ ಒಂದು ಅಂಕ

ಗುಂಡ ಮನೆಗೆ ಬರುವಾಗ ಹೆಂಡತಿ ಮಗನಿಗೆ ಚಚ್ಚುತ್ತ ಇದ್ದಳು. ಯಾಕೆ ಎಂದು ವಿಚಾರಿಸಿದ ಗುಂಡ. `ನೆರೆಮನೆ ಹುಡುಗಿಗೆ ನೂರಕ್ಕೆ ತೊಂಬತ್ತೊಂಬತ್ತು ಅಂಕ ಬಂದಿದೆ' ಎಂದಳು ಹೆಂಡತಿ. 'ಅರರೇ, ಅವಳಿಗೆ ಇನ್ನೂ ಒಂದು ಅಂಕ ಬರಬೇಕಿತ್ತಲ್ಲವೆ, ಅದನ್ನು ಕೇಳೋದು ಬಿಟ್ಟು ಇವನಿಗ್ಯಾಕೆ ಹೊಡೆಯುತ್ತೀಯಾ?' ತುಂಟತನದಿಂದ ಪ್ರಶ್ನಿಸಿದ. ಅದರಿಂದ ಸಿಟ್ಟು ಮತ್ತೂ ನೆತ್ತಿಗೇರಿ, ಗುಂಡನಿಗೆ ಅವಳು ಹೇಳಿದಳು, 'ಅವಳಿಗೇ ಬರಬೇಕಾಗಿದ್ದ ಆ ಒಂದು ಅಂಕ ಇವನಿಗೆ ಬಂದಿದೆ, ಅದಕ್ಕೆ!'

**ಪ. ರಾಮಕೃಷ್ಣ ಶಾಸ್ತ್ರಿ,**





## ಬೆಕ್ಕಿನ ಡ್ಯಾನ್ಸ್...

ಹುಲಿಯೊಂದು ಕಾಡಿನಲ್ಲಿ ತನ್ನ ಜೊತೆ ವಾಸಿಸುವ ಇತರೆ ಪ್ರಾಣಿಗಳಿಗೆ ತಾನು ಮದುವೆಯಾದ ಸಲುವಾಗಿ ಪಾರ್ಟಿ ಕೊಡ್ತಾ ಇತ್ತು. ಆ ಪಾರ್ಟಿಯಲ್ಲಿ ಒಂದು ಬೆಕ್ಕು ಯಾವ ಭಯವಿಲ್ಲದೆ ಡ್ಯಾನ್ಸ್ ಮಾಡ್ತಾ ಇತ್ತು. ಅದನ್ನು ನೋಡಿ ಹುಲಿಗೆ ಸಿಟ್ಟು ಮತ್ತು ನಗು ಬಂದು ಬೆಕ್ಕಿಗೆ, 'ನಿನಗೆಷ್ಟು ಧೈರ್ಯ, ಇಲ್ಲಿ ಬಂದು ನಿರ್ಭಯವಾಗಿ ಡ್ಯಾನ್ಸ್ ಮಾಡೋಕೆ?' ಅಂತ ಕೇಳಿತು.

ಬೆಕ್ಕು ಡ್ಯಾನ್ಸ್ ಮಾಡುತ್ತಲೇ ಹುಲಿಗೆ ಹೇಳಿತು, 'ಮದುವೆಗೆ ಮುಂಚೆ ನಾನೂ ಕೂಡ ಹುಲಿನೇ ಆಗಿದ್ದೆ ಮಾರಾಯ...!'

**ವಿ. ಹೇಮಂತ ಕುಮಾರ್**

ಕಲೆ: ಗಣೇಶ ಆಚಾರ್ಯ